# ಅಮ್ಮ ನಿಮ್ಮ ಮನೆಗಳಲ್ಲಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page no. 35
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 32
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page no. 117
4. **Note:** Lyrics given without highlights are as per Ref. 1. The wordings given in yellow highlights are as per Ref. 2. Wordings in Ref. 3 are almost similar to Ref. 2. The wordings in Ref. 1 and Ref. 2 are slightly different.
5. **Note:** Singer has followed lyrics as in Ref. 2.
6. **Note:** Ankita is different in these books. We have considered Ref.2 as standard and taken that Ankita for listing.

| | |
|---|---|
| ರಾಗ: ಸೌರಾಷ್ಟ್ರ ತಾಳ: ಆದಿ | ರಾಗ: ಸೌರಾಷ್ಟ್ರ ತಾಳ: ಆದಿ |
| | |
| ಅಮ್ಮ ನಿಮ್ಮ ಮನೆಗಳಲ್ಲಿ | ಅಮ್ಮ ನಿಮ್ಮ ಮನೆಗಳಲ್ಲಿ |
| ನಮ್ಮ ರಂಗನ ಕಂಡಿರೇನಮ್ಮ \|\| ಪ \|\| | ನಮ್ಮ ಕೃಷ್ಣನ ಕಾಣಿರೇನೆ |
| | |
| ಬ್ರಹ್ಮ ಮೂರುತಿ ನಮ್ಮ ಕೃಷ್ಣನು | ಸುಮ್ಮನೆ ಸುರ ಸಜ್ಜನರ ಸಂಘ |
| ನಿಮ್ಮ ಕೇರಿಯೊಳಿಲ್ಲವೆ \|\| ಅಪ \|\| | ಗಮ್ಮನೆ ಮರುಳ ಮಾಡಿದನಮ್ಮ |
| | |
| ಕಾಶಿ ಪೀತಾಂಬರ ಕೈಯಲ್ಲಿ ಕೊಳಲು | ಕುಂಕುಮ ಕಸ್ತೂರಿ ಕಿರು-ತಿರು-ನಾಮವ |
| ಪೂಸಿದ ಶ್ರೀಗಂಧ ಮೈಯೊಳಗಮ್ಮ | ಶಂಖ ಚಕ್ರಗಳ ಧರಿಸಿದನ |
| ಲೇಸಾಗಿ ತುಳಸಿಯ ಮಾಲೆಯ ಧರಿಸಿದ | ಬಿಂಕದಲ್ಲಿ ಕೊಳಲೂದುವ ಹಾಡುವ ನಮ್ಮ |
| ವಾಸುದೇವನು ಬಂದ ಕಾಣಿರೇನೆ \|\| ೧ \|\| | ಪಂಕಜ-ನಾಭನ ಕಾಣಿರೇನೆ |
| | |
| ಕರದಲ್ಲಿ ಕಂಕಣ ಬೆರಳಲ್ಲಿ ಉಂಗುರ | ಕಾಶಿ ಪೀತಾಂಬರ ಕೈಯಲಿ ಕೊಳಲು |
| ಕೊರಳಲ್ಲಿ ಹಾಕಿದ ಹುಲಿಯುಗುರಮ್ಮ | ಪೂಸಿದ ಶ್ರೀಗಂಧ ಮೈಯಲಿ |
| ಅರಳೆಲೆ ಕನಕ ಕುಂಡಲ ಕಲಾಲಂದುಗೆ | ಲೇಸಾದ ಪುಷ್ಪ ಮಾಲಿಕೆ ಹಾಕಿದ ನಮ್ಮ |
| ಉರಗಶಯನ ಬಂದ ಕಂಡಿರೇನೆ \|\| ೨ \|\| | ವಾಸುದೇವ ಹರಿ ಬಂದ ಕಾಣಿರೇನೆ |
| | |
| ಕುಂಕುಮ ಕಸ್ತೂರಿ ಕರಿ ನಾಮ ತಿದ್ದಿ | ಕರದಲಿ ಕಂಕಣ ಬೆರಳಲಿ ಉಂಗುರ |

ಶಂಖ ಚಕ್ರಗಳ ಧರಿಸಿಹನಮ್ಮ

ಬಿಂಕದಿಂದಲಿ ಕೊಳಲೂದುತ್ತ ಪಾಡುತ್ತ

ಪಂಕಜಾಕ್ಷನು ಬಂದ ಕಾಣಿರೇನೆ || ೩ ||

ಮಾವನ ಮಡುಹಿದ ಶಕಟನ ಕೆಡಹಿದ

ಗೋವರ್ಧನ ಗಿರಿ ಎತ್ತಿದನಮ್ಮ

ಆವ ತಾಯಿಗೆ ಈರೇಳು ಜಗ ತೋರಿದ

ಕಾವನಯ್ಯ ಬಂದ ಕಾಣಿರೇನೆ || ೪ ||

ಕಾಲಲಿ ಕಿರು ಗೆಜ್ಜೆ ನೀಲದ ಬಾವುಲಿ

ನೀಲ ವರ್ಣನು ನಾಟ್ಯವಾಡುತಲಿ

ಮೇಲಾಗಿ ಬಾಯಲ್ಲಿ ಜಗವನ್ನು ತೋರಿದ

ಮೂಲೋಕದೊಡೆಯನ ಕಂಡಿರೇನೆ || ೫ ||

ಹದಿನಾರು ಸಾವಿರ ಗೋಪಿಯರ ಕೂಡಿ

ಚದುರಂಗ ಪಗಡೆಯನಾಡುವನಮ್ಮ

ಮದನ ಮೋಹನ ರೂಪ ಎದೆಯಲ್ಲಿ ಕೌಸ್ತುಭ

ಮಧುಸೂದನ ಬಂದ ಕಾಣಿರೇನೆ || ೬ ||

ತೆತ್ತೀಸ ಕೋಟಿ ದೇವರ್ಕಳ ಒಡಗೂಡಿ

ಹತ್ತಾವತಾರವನೆತ್ತಿದನಮ್ಮ

ಸತ್ಯಭಾಮಾ ಪ್ರಿಯ ಪುರಂದರ ವಿಠಲ

ನಿತ್ಯೋತ್ಸವ ಬಂದ ಕಾಣಿರೇನೆ || ೭ ||

ಕೊರಳಲಿ ಹಾಕಿದ ಹುಲಿಯುಗುರಮ್ಮ

ಅರಳೆಲೆ ಕನಕ ಕುಂಡಲ ಕಲಾಲಂದಿಗೆ ನಮ್ಮ

ಉರಗ ಶಯನ ಬಂದ ಕಾಣಿರೇನೆ

ಹದಿನಾರು ಸಾವಿರ ಗೋಪ ಸ್ತ್ರೀಯರ ಕೂಡಿ

ಚದುರಂಗ ಪಗಡೆಯನಾಡಿದನ

ಮದನ ಮೋಹನ ರೂಪ ಎದೆಯಲ್ಲಿ ಕೌಸ್ತುಭ ನಮ್ಮ

ಮಧುಸೂಧನ ಬಂದ ಕಾಣಿರೇನೆ

ತೆತ್ತೀಸ ಕೋಟಿ ದೇವತೆಗಳು ಕೂಡಿ

ಹತ್ತವತಾರವ ಧರಿಸಿದನ

ಸತ್ಯಭಾಮೆಯ ಅರಸ ಶ್ರೀ ಪುರಂದರ ವಿಠ್ಠಲ

ನಿತ್ಯೋತ್ಸವ ಬಂದ ಕಾಣಿರೇನೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕೃಷ್ಣನನ್ನು ಹುಡುಕುತ್ತ ಯಶೋದೆ ನೆರೆಹೊರೆಯ ಮನೆಗಳಲ್ಲಿ ' ನಮ್ಮ ಕೃಷ್ಣನನ್ನು ನೋಡಿದ್ದೀರಾ? ' ಎಂದು ಕೇಳುವ ಮಾತುಗಳು ಈ ಹಾಡಿನಲ್ಲಿವೆ.

**ತಿರುನಾಮ** = ಶ್ರೀ ನಾಮ

**ಸತ್ಯಭಾಮೆ** = ಕೃಷ್ಣನ ಅಷ್ಟ ಮಹಿಷೆಯರಲ್ಲಿ ಒಬ್ಬಳು

**ನಿತ್ಯೋತ್ಸವ** = ಸದಾನಂದ

**ಅರಳೆಲೆ** – ಅರಳಿಯ ಎಲೆಯ ಆಕಾರದಲ್ಲಿರುವ ಪದಕ.

**ಬಾವುಲಿ** – ಕಿವಿಯ ಮೇಲ್ಭಾಗದಲ್ಲಿ ಧರಿಸುವ ಚಿನ್ನದ ಆಭರಣ.

**ಕುಡು ಕುಡಿ ನಾಮ** – ಚೂಪಾಗಿ ತಿದ್ದಿದ ತೆಳು ನಾಮ.

**ನೊಸಲ ಸುತ್ತಿದ ಪಟ್ಟಿ** – ಹಣೆಯ ಮೇಲೆ ತೊಡುವ ಆಭರಣ.

**ಪಟ್ಟೆಯ ಹಾವಿಗೆ** – ಕಾಲಿಗೆ ರೇಷ್ಮೆಯ ಮೆಟ್ಟು.

**ತತ್ತೀಸ** – ಮೂವತ್ತು ಮೂರು (ತ್ರಯಸ್ತ್ರಿಂಶತ್ ಎನ್ನುವುದರ ತದ್ಭವ).

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Group Words:** Krishna, yashode, mane, jana, Kasturi, gandha, shankha, chakra, kolalu, kai, pushpa, tulasi, ungura, uraga, gopi, kamsa, parvata, loka, tayi, asura, gejje, bayi,
**Pravachana:** NA
**Explanation:** NA